ಮೈಸೂರ ಗೆಜೆಟ.

ನಂ. 48 ಸರ್ಕಾರದಿಂದ ಪ್ರಯಿಷ್ ಆದ್ದು. ಸನ್ 1884.

ಬೆಂಗಳೂರು, ಶನಿವಾರ, ನವಂಬರ್ ತಾ|| 29, ಸನ್ 1884.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಇನಾಂ ಸೂಪರ್ಟೆಂಡೆಂಟರು, ಕಾಂಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮೈಸೂರು ಸ್ಟೇಟ್‌ರೇಯಿಲ್‌ವೆ, ರಿಜಿಸ್ಟ್ರೇಷ್ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಜೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷ್ಷ ಜಡ್ಜ್‌ರು, ಡಿ|| ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್‌ಸೂಪರ್ಟೆಂಡೆಂಟರು, ಫಾರೆಸ್ಟ್ರು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟ್ಆಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷ್ಷಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 4ನೇ ನವಂಬರ್ 1884.

ನಂ. 164.—ಸನ್ 1883ನೇ ಇಸವಿ ಮಾರ್ಚೀ 5ನೇ ಮಕ್ತುಂ 65ನೇ ನಂಬರ್ ಇಸ್ತಿಹಾರ್ ನಾಮೆಯನ್ನು ತಿದ್ದುಪಡಿಮಾಡಿ, ಚನ್ನಪಟ್ಟಣದ ಡೆಪ್ಯೂಟಿ ಅಮಲ್‌ದಾರ್ರ ಭಾಜೀನ ಒಂದು ಭಾಗವಾಗಿದ್ದ ವಿರುಪಾಕ್ಷಿಪುರ ವ ಹೊಂಗನೂರ ಹೋಬಳಿಗಳು, ಕ್ಲೋಸ್‌ಪೇಟೆ ತಾಲ್ಲೂಕು ಅಮಲ್‌ದಾರ್ರ ಅಧಿಕಾರಕ್ಕೆ ಇದರಿಂದ ವರ್ಗವಾಡಲ್ಪಟ್ಟಿರುತವೆ.

ತಾರೀಖು 5ನೇ ನವಂಬರ್ 1884.

ನಂ. 168.—ಬೆಂಗಳೂರು ಷಹರ್ ಪೊಲೀಸ್ ಇಲಾಖೆ ವ್ಯಷ್ಷ ವ ಗ್ಯಾಚ್ಯುಯಿಟೆಗಳಿಗೆ ಸಂಬಂಧಪಟ್ಟ ಮೈಸೂರು ದಿವಾನರವರ ಯಿದರಡೀಕಂಡ ಆರ್ಡರ್ ಸರ್ವರ ತಿಳುವಳಿಕೆ ಬಗ್ಯೆ ಪ್ರಕಟಿಸಲ್ಪಡುತ್ತೆ:—

ನಂಬರ್ 4515–16—341, ತಾರೀಖು 31ನೇ ಅಕ್ಟೋಬರ್ 1884.

ಆರ್ಡರ್.—ಬೆಂಗಳೂರು ಷಹರಿನ ಪೊಲೀಸ್ ಸೂಪರ್ ಆನ್ಯುಯಿಷ್ಷ ಫಂಡಿಗೆ 1884ನೇ ಇಸವಿ ಏಪ್ರಿಲ್ 1ನೇ ಮಕ್ತುಂ ವರಿಗೆ 9,860—1—5 ರೂಪಾಯಿ ಜಮೆ ಆಗಿರುತ್ತೆ.

2. ಬೆಂಗಳೂರು ಷಹರ್ ಪೊಲೀಸ್ ಇಲಾಖೆಯು, ತಲಬ್ ವಿಷಯದಲ್ಲಿ, ದೇಶದ ಇತರ ಭಾಗಗಳ ಪೊಲೀಸ್ ಇಲಾಖೆ ಯಾವ ಸ್ಥಿತಿಯಲ್ಲಿದೆಯೋ ಅದೇ ಸ್ಥಿತಿಯಲ್ಲೇ ಪ್ರಾಯಶಃ ಯಿರುತ್ತಿದೆ; ಮತ್ತು ಈ ದೇಶದ ಪೊಲೀಸ್ ಇಲಾಖೆ ತಮ್ಮಾಂ ನವಕರರಿಗೂ, ಸರ್ಕಾರ್ ನವಕರರು ಇತರ ಇಲಾಖೆಗಳಲ್ಲಿ ಪಡೆಯುವಂತೆಯೇ ಪೆರ್ಷ್ಷ ವ ಗ್ರಾಚ್ಯುಯಿಟಿಗಳು ಸರ್ಕಾರದಿಂದ ಕೊಡಲ್ಪಡುತ್ತಾ ಯಿದೆ. ಈ ಕಾರಣಗಳಿಂದ ಗವರ್ನ್‌ಮೆಂಟಿನವರು ಹುಕ್ಕುಂ ಮಾಡುವದೇನಂದರೆ, 1884ನೇ ಇಸವಿ ನವೆಂಬರ್ ಗುರ್ರೇ ತಾರೀಖಿನ ಲಾಗಾಯತು ಬೆಂಗಳೂರು ಷಹರ್ ಪೊಲೀಸ್ ಸೂಪರ್ ಆನ್ಯುಏಷ್ಷ ಫಂಡ್ ಮೌಕೂಫಗತಕ್ಕದ್ದು ನುತ್ತು ಸದರೀ ತಾರೀಖಿನಲ್ಲಿ ಸದರೀ ಫಂಡಿಗೆ ಕೇರಿರತಕ್ಕ ತಮ್ಮಾಂ ಜಾಮೀರ್ಗಳೂ, ಮೊಬಲಗಗಳೂ, ಮೈಸೂರು ಗವರ್ನ್‌ಮೆಂಟಿಗೆ ವರ್ಗ ಮಾಡಲ್ಪಟ್ಟು ಗವರ್ನ್‌ಮೆಂಟಿನ ವಟ್ಟು ಕೆಲಸಗಳಿಗೋಸ್ಕರ ಕೊಟ್ಟು ಬಿಡಲ್ಪಡತಕ್ಕದ್ದು.

3. ಮೇಲಿ ಕಂಡ 1884ನೇ ಇಸವಿ ನವೆಂಬರ್ 1ನೇ ಮುಕ್ಕುಂ ಲಾಗಾಯತು ಬೆಂಗಳೂರು ಷಹರ್ ಪೊಲೀಸ್ ನವಕರರ ತಲಬಿನಿಂದ ಸದರೀ ಫಂಡಿಗೆ ಚಂದಾ ತರೀಕ್ ವಸೂಲ್ ಮಾಡಲ್ಪಡಕೂಡದು.

4. ಪೆರ್ಷ್ಷ ವ ಗ್ರಾಚ್ಯುಯಿಟಿಗಳ ವಿಷಯದಲ್ಲಿ ಇಂಡ್ಯ ಗವರ್ನ್‌ಮೆಂಟಿನವರ 1877ನೇ ಇಸವಿ ಮೇ 11ನೇ ಮುಕ್ಕುಂ 549ನೇ ನಂಬರಿನ ಇಸ್ತಿಹಾರ್ ನಾಮೆಯಲ್ಲಿ ಮಂಜೂರ್ಮಾಡಲ್ಪಟ್ಟ ನಿಬಂಧನೆಗಳು ತಾತ್ಕಾಲಿಕದಲ್ಲಿ ಬೆಂಗಳೂರು ಷಹರ್ ಪೊಲೀಸ್ ನವಕರರಿಗೂ ಲಾಗಾಯಿತಗತಕ್ಕದ್ದು.

ತಾರೀಖು 15ನೇ ನವೆಂಬರ್ 1884.

ನಂ. 169.—ಮುದ್ದಗಿರಿ ತಾಲ್ಲೂಕು ಕೊರಟಿಗೆರೆ ಹಿಪ್ಪೈಟ ಅಮಲ್ದಾರ್ ಜೆ. ತಿರುನಾರಣಯ್ಯಂಗಾರ್ರಿಗೆ, 1884ನೇ ಇಸವಿ ಮೇ 2ನೇ ಮುಕ್ಕುಂ 16ನೇ ನಂಬರ್ ಮತ್ತು ಜುಲೈ 25ನೇ ಮುಕ್ಕುಂ 89ನೇ ನಂಬರ್ ಇಸ್ತಿಹಾರ್ನಾಮೆಗಳಿಂದ ಕೊಡಲ್ಪಟ್ಟ ಸ್ವಂತಕೆಲಸದ ರಜಾವನ್ನ ಇನ್ನೂ ಮೂರುತಿಂಗಳು ಜಾಸ್ತೀವಾಡಲ್ಪಟ್ಟಿರುತ್ತೆ. ರಜಾದ ಪೂರ್ತಿಯಾದ ಕಾಲವು, ಸಿವಿಲ್ ಲೀವ್ ಕೋಡಿನ 141ನೇ ಸೆಕ್ಷನ್ ಪ್ರಕಾರ ಫರ್ಲೋ ರಜಾ ಯಂದು ಭಾವಿಸತಕ್ಕದ್ದು.

ನಂ. 170.—ತುಮಕೂರು ಮುನಿಸಿಫ್ ವ ಮೂರನೇ ಕ್ಲಾಸ್ ಮಾಜಿಸ್ಟ್ರೇಟ್ ಅಂಣಾಜಿರಾಯರಿಗೆ, ಯರಡನೇ ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತೆ.

ತಾರೀಖು 18ನೇ ನವೆಂಬರ್ 1884.

ನಂ. 172.—1877ನೇ ಇಸವಿ IIIನೇ ನಂಬರ್ ರಿಜಿಸ್ಟ್ರೇಷ್ಷ ಆಕ್ಟಿನ 5ನೇ ಸೆಕ್ಷನ್ ಅನುಸರಿಸಿ ಇದರಿಂದ ಸರ್ವರ ತಿಳುವಳಿಕೆಗೆ ಬ್ಯೆ ಪ್ರಕಟಪಡಿಸುವದೇನಂದರೆ, ಹಾಲೀ ಜನ್ನಪಟ್ಟಣದ ಸಬ್ ರಿಜಿಸ್ಟ್ರಿಕ್ಟಿಗೆ ಕೇರಿದ ಹೊಂಗನೂರು ಮತ್ತು ನಿರುಪಾಕ್ಷಿಪುರ ಹೋಬಳಿಗಳು, 1884ನೇ ಇಸವಿ ನವೆಂಬರ್ ಗುರ್ರೇ ತಾರೀಖು ಲಾಗಾಯತು ಕ್ಲೋಸ್ ಪೇಟೆ ಸಬ್ ರಿಜಿಸ್ಟ್ರಿಕ್ಟಿಗೆ ವರ್ಗ ಮಾಡಲ್ಪಡತಕ್ಕದ್ದು.

ನಂ. 173.—ಬಾರ್ ಇಲಾಖೆಯ ಇದರೀ ಕಂಡ ಕಮ್ಮಿಷ್ಷರ್ಡ್ ಹುದ್ದೇದಾರರ ಬಡ್ತಿಗಳು, 1884ನೇ ಇಸವಿ ಅಕ್ಟೋಬರ್ 1ನೇ ಮುಕ್ಕುಂ ಲಾಗಾಯತು ಮಂಜೂರ್ಮಾಡಲ್ಪಟ್ಟಿರುತವೆ:—

ನಂಬರ್.	ಹೆಸರುಗಳು.	ಪರ್ಗಾಲ.	ಹಾಲೀ ಇರತಕ್ಕ ಹುದ್ದೆ ಮತ್ತು ತಲಬು.		ಯಾವ ಹುದ್ದೆಗೆ ಬಡ್ತೀ ಮತ್ತು ಅದರ ತಲಬು.	
				ರೂ.		ರೂ.
1	ಬಹದೂರ್‌ಖಾ	3ನೇ	2ನೇ ಕ್ಲಾಸ್ ಸುಬೇದಾರ್	25	1ನೇ ಕ್ಲಾಸ್ ಸುಬೇದಾರ್	30
2	ಮುಹಮ್ಮದ್ ಉಮ್ಮರ್	3ನೇ	ಡಿಟೋ	25	ಡಿಟೋ	30
3	ಕಿಂಗಿ	3ನೇ	2ನೇ ಕ್ಲಾಸ್ ಜಮೇದಾರ್	14	1ನೇ ಕ್ಲಾಸ್ ಜಮೇದಾರ್	16
4	ಷೇಕ್ ಹೈದರ್	3ನೇ	ಡಿಟೋ	14	ಡಿಟೋ	16

ತಾರೀಖು 20ನೇ ನವೆಂಬರ್ 1884.

ನಂ. 175.—ಸೂಪರ್ ನ್ಯೂಮರೇರಿ ಸಬಾರ್ಡಿನೇಟ್ ಜಡ್ಜ್ ಮೆ॥ ಬಿ. ತಿರುಮಲಾಚಾರ್ಯ, ಕಡೂರು ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಆಫೀಸು ಚಾರ್ಜನ್ನು 1884ನೇ ಇಸವಿ ನವೆಂಬರ್ 12ನೇ ಮಕ್ಕಿಮಿನ ಮಧ್ಯಾನ್ಹಾತ್ಪರ ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ನಾಗೇಶರಾಯರಿಗೆ ಬಿಟ್ಟುಕೊಡುತ್ತಾರೆ.

ನಂ. 176.—ಕೋಲಾರ ಡಿಸ್ಟ್ರಿಕ್ಟ್, ಮುಳಬಾಗಿಲ್ ತಾಲ್ಲೂಕು ಅಮಲ್ದಾರ್ ಕುಮಾರಸ್ವಾಮಿ ಮೊದಲಿಯಾರ್‌ಗೆ, ಆವರು ಉಪಯೋಗಿಸಿಕೊಂಡ ತಾರೀಖು ಲಾಗಾಯತು ಹತ್ತು ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 21ನೇ ನವೆಂಬರ್ 1884.

ನಂ. 177.—ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಇ. ಸಿ. ಷಣ್ಮುಗವೇಲುಪಿಳ್ಳೈಯವರು, 1884ನೇ ಇಸವಿ ನವೆಂಬರ್ 4ನೇ ಮಕ್ಕಿಮಿನ ಪೂರ್ವಾನ್ಹದಲ್ಲಿ ಮರಳಿ ಕೆಲಸದ ಮೇಲೆ ಬಂದಿರುವದರಿಂದ ಅವರಿಗೆ 1884ನೇ ಇಸವಿ ನವೆಂಬರ್ 5ನೇ ಮಕ್ಕಿಂ 165ನೇ ನಂಬರ್‌ವುಳ್ಳ ಈ ಆಫೀಸ್ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟಿದ್ದ ಕ್ಯಾಜುಯಲ್ ರಜಾ ಪೈಕೀ ಉಳಿದ ಭಾಗವು ರದ್ದುಮಾಡಲ್ಪಟ್ಟಿರುತ್ತೆ.

ನಂ. 178.—ಶಿವಮೊಗ್ಗಾ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಸೈಯ್ಯದ್ ನಸಿರುದ್ದೀಯವರಿಗೆ, 1884ನೇ ಇಸವಿ ಜೂನ್ 12ನೇ ಮಕ್ಕಿಂ 54ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ ರಜಾಕ್ಕೆ ಜಾಸ್ತೀಯಾಗಿ 19 ದಿವಸಗಳ ಪ್ರಿವೀಲಿಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 179.—ನೆಲಮಂಗಲದ ಆಕ್ಟಿಂಗ್ ಮುನಿಸಿಫ್ ಯಸ್. ವೆಂಕಟವರದಯ್ಯಂಗಾರ್ರು, ಫವತೀಪಟ್ಟ ಯಂ. ಶ್ರೀನಿವಾಸಯ್ಯಂಗಾರಿಗೆ ಬದಲಾಗಿ, 3ನೇ ಗ್ರೇಡ್ ಮುನಿಸಿಫ್‌ರಾಗಿ ಕಾಯಂ ಮಾಡಲ್ಪಟ್ಟಿರುತ್ತಾರೆ.

ಚಿತ್ರದುರ್ಗದ ಆಕ್ಟಿಂಗ್ ಮುನಿಸಿಫ್ ಬಿ. ಶ್ರೀನಿವಾಸರಾಯರು, ಫವತೀಪಟ್ಟ ವೆಂಕಟರಾಯರಿಗೆ ಬದಲಾಗಿ, 3ನೇ ಗ್ರೇಡ್ ಮುನಿಸಿಫರಾಗಿ ಕಾಯಂ ಮಾಡಲ್ಪಟ್ಟಿರುತ್ತಾರೆ.

ತಾರೀಖು 10ನೇ ನವೆಂಬರ್ 1884.

ನಂ. 181.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಕೆಲವು ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮಗಳು ವೃತ್ತೀವಾರಾಗಿ ಇದರಡೀಕಂಡ ತಖ್ತೇಯಲ್ಲಿ ನಮೂದಿರುವ ಸ್ಥಳಗಳಲ್ಲೂ ತಾರೀಖುಗಳಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವವು. ಮತ್ತು ಸದರೀ ತಾರೀಖಿನಲ್ಲಿ ಬೆಳ್ಗೆ 11 ಘಂಟೆಗೆ ಹರಾಜು ಪುರುವಾಗಿ, ಉಳಿಕೆ ಯಾವದೂ ಇಲ್ಲದೆ ವೃತ್ತಿಗಳು ಚಡೆ ದರಖಾಸ್ತುದಾರನಿಗೆ ಹರಾಜ್ ನಿಲ್ಲುವದು.

2. ಪರಂತು ಪ್ರಥಮತಃ ಹರಾಜು ಮಾಡಲ್ಪಡುವ ವೃತ್ತಿಗಳ ಮೇಲೆ ಬಾಕೀ ಆಗತಕ್ಕ ಪೂರಾ ಕಂದಾಯದ ಮೊಬಲಗು ಹುಟ್ಟುವ ಆಗದೆ ಯಿರುವ ಪಕ್ಷದಲ್ಲಿ ಪೂರಾ ಗ್ರಾಮವನ್ನು ಹರಾಜ್ ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಕೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರ್ತಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂತವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮುವ್ಕೂಫ್ ಮಾಡಲ್ಪಡತಕ್ಕದ್ದು; ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ಹರಾಜ್ ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಕಾಯಮಾದ್ದಾಗಿರುವದಿಲ್ಲ.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಭರತೀ ಮಾಡಿ, ಹರಾಜನ್ನು ದಿವಾನರವರು ಕಾಯಂ ಮಾಡಿದ ಕೂಡ್ಲೆ ವೃತ್ತಿಗಳು ಅತನ ಸುಪರ್ದು ಮಾಡಲ್ಪಟ್ಟು ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡಿಪ್ಯುಟಿ ಕಮ್ಮಿಷನರವರಿಂದಾಗಲಿ ಸಂದರ್ಭಾನುಸಾರ ಸಬ್ ಡಿವೀರ್ಜ ಆಫೀಸರಿಂದಾಗಲಿ ರುಜು ಮೊಹರ್ ಮಾಡೋಣಾದ ಒಂದು ಸರ್ಟಿಫಿಕೇಟ್ ಅತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜು ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು ಸದರೀ ಹರಾಜಿನಿಂದ ನುಕ್ಸಾನ ಪಟ್ಟಂತೆ ಎಣಿಸುವ ಜನಗಳು, ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲ್‌ನಲ್ಲಿ ಆಗುವ ಆಜ್ಞೆಯ ಹುಕುಮಿಗೆ ಸದರೀ ಕ್ರಯವು ಬಳಪಟ್ಟಿರುತ್ತೆ.

ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜು ಬೀಜವರೀ. ತರೀ ಖುಷ್ಕಿ ಸಹ	ಅಂದಾಜು ಹುಟ್ಟುವಳಿಯ ಜೇರೀಜು.	ಸಾಲಿಯಾನಾ ಸರ್ಕಾರಕ್ಕೆ ಕೊಡಬೇಕಾದ ಕ್ವಿಟೆರೆಂಟ್.	ಯಾವಬಾಕೀಗೋಸ್ಕರ ಗ್ರಾಮ ಹರಾಜ್ ಮಾಡಲ್ಪಡುತ್ತೊ ಅಂಥಾ ಸರ್ಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
				ಖಂ. ಕೂ. ಪ.	ರೂ. ಆ. ಪೈ.	ರೂ. ಅ. ಪೈ.	ರೂ. ಆ. ಪೈ.	
ಬೆಂಗಳೂರು	ಕಾಣಿಗಲ್	ಕಾಣಿಗಲ್	ಜೋಡಿಕೃಷ್ಣಸಾಗರ ಅಗ್ರಹಾರ	ಪುಟ್ಟಯ್ಯನವ ಅರುಣಾಚಲ ಭಟ್ಟ	6 6 0	87 3 8	65 3 7	133 7 7	ಅಮಲ್ದಾರರ ರೂಬರೂ ಇನ್ನಿ 1885ನೇ ಜನವರಿ 7ನೇ ತಾರೀಖು ಕಂಗೆಗಲ್‌ನಲ್ಲಿ
ಕೋಲಾರ	ಬೇಲೂರು	ತಗಸಿ	ಜೋಡಿ ಸನ್ಯಾಸಿಹಳ್ಳಿ	ಭಾಗೀರತಮ್ಮ ಕೇಶವಾಚಾರೀ ಇತರ 8 ಮಂದಿ	ತರೀ ಖುಷ್ಕಿ ಎ. ಗುಂ. ಗ. 183 19 0	217 12 0	132 12 0	204 12 10 ಬಡ್ಡೀ ಮತ್ತು ಬಾಂದುಲಾಗವಡು ವಗೈರೆ ದೇಖೀಲ್.	ಅಮಲ್ದಾರರ ರೂಬರೂ ಇನ್ನಿ 1885ನೇ ಜನವರಿ 7ನೇ ತಾರೀಖು ಬೇಲೂರಿನಲ್ಲಿ

ತಾರೀಖು 21ನೇ ಮಾರ್ಚೀ 1883.

ನಂ. 84.— ಕಾರ್ಯಾರ್ಥ ದೀವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು. ಈ ಬಗ್ಗೆ ಹಿಂದಿನ ದಿನ ಸೆಕ್ರಟೇರಿಯವರಿಗೆ ತಮ್ಮ ಕಾರ್ಡ್‌ಗಳನ್ನು ಕಳುಹಿಸತಕ್ಕದ್ದು.

2. ಅರ್ಜೀದಾರರು ಶುಕ್ರವಾರಗಳ ದಿನ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಯಲ್ಲಿ ಕೇಳಲ್ಪಡುವರು.

ಬಮೋಜೀಬ್ ಹುಕುಂ,
ಆರ್. ವಿಜಯಿಂದ್ರರಾವ್,
ಸೆಕ್ರಟೇರಿ.